ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ)(ತಿದ್ದುಪಡಿ) ವಿಧೇಯಕ, ೨೦೧೨ ಅನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಅಧ್ಯಕ್ಷರು:- ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಉಪ ಮುಖ್ಯಮಂತ್ರಿಗಳುಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಪರವಾಗಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ)(ತಿದ್ದುಪಡಿ) ವಿಧೇಯಕ, ೨೦೧೨ ಅನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:-ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ–7)

6. ಕರ್ನಾಟಕ ಸೌಹಾರ್ದ ಸಹಕಾರಿ(ತಿದ್ದುಪಡಿ) ವಿಧೇಯಕ, ೨೦೧೨

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಸಹಕಾರ ಸಚಿವರ ಪರವಾಗಿ) ಕರ್ನಾಟಕ ಸೌಹಾರ್ದ . ಸಹಕಾರಿ(ತಿದ್ದುಪಡಿ)ವಿಧೇಯಕ,೨೦೧೨ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

ಶ್ರೀ ಬಿ.ಬಿ.ಜಯಚಂದ್ರ:- ಈಗ ಬಿಜೆಪಿಯ ಸಹಕಾರ ಸಚಿವರು ಇದ್ದಾರೆಯೇ?

ಅಧ್ಯಕ್ಷರು:- ಮುಖ್ಯಮಂತ್ರಿಗಳು ಪತ್ರವನ್ನು ಕೊಟ್ಟಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ:- ಅವರು ಸಚಿವರಾಗಿದ್ದಾರೆಯೇ ಅಥವಾ ಇಲ್ಲವೇ?

ಅಧ್ಯಕ್ಷರು:- ಮುಖ್ಯಮಂತ್ರಿಗಳು ಪತ್ರವನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ:- ಬಿ.ಜೆ.ಪುಟ್ಟಸ್ವಾಮಿಯವರ ಹೆಸರಿನಲ್ಲಿ ಬಿಲ್ ಇರುವುದು. ಈಗ ಆ ಸಚಿವರಾಗಿದ್ದಾರೆಯೇ?

ಅಧ್ಯಕ್ಷರು:- ಇಲ್ಲ. ಆದರೆ ಮುಖ್ಯಮಂತ್ರಿಗಳು ಪತ್ರವನ್ನು ಕೊಟ್ಟಿದ್ದಾರೆ.

ಶ್ರೀ ಸಿದ್ಧರಾಮಯ್ಯ:- ಹಾಗಿದ್ದಲ್ಲಿ ಬಿಲ್ ಅನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀಎಸ್.ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಬಿಲ್ ಅನ್ನು ಈಗ ವಾಪಸ್ ತೆಗೆದು-ಕೊಳ್ಳುವುದಕ್ಕೆ ಆಗುವುದಿಲ್ಲ. ಪುಟ್ಟಸ್ವಾಮಿಯವರ ಹೆಸರನ್ನು ವಾಪಸ್ ತೆಗೆದುಕೊಳ್ಳುತ್ತೇವೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- Who is the Co-operation Minister?

ಅಧ್ಯಕ್ಷರು:- ಮುಖ್ಯಮಂತ್ರಿಗಳು ಒಂದು ಪತ್ರವನ್ನು ಕೊಟ್ಟಿದ್ದಾರೆ, ಅದನ್ನು ಓದುತ್ತೇನೆ:

ಶ್ರೀ ಸಿದ್ಧರಾಮಯ್ಯ:-ಪತ್ರ ಬರೆದಿದ್ದಾರೆಯೇ, ಓದಿ ಸ್ವಾಮಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಮುಖ್ಯಮಂತ್ರಿಗಳು ಬರೆದಿರುವ ಪತ್ರವನ್ನು ಸದನದಲ್ಲಿ ಓದಿದರು)

ಅಧ್ಯಕ್ಷರು:-``೧೩ನೆ ವಿಧಾನಸಭೆ ಹದಿನೈದನೇ ಅಧಿವೇಶನದ ೧೦.೧೨.೨೦೧೨ ರಿಂದ ಅನ್ವಯಿಸುವಂತೆ ಹಾಗು ಈ ಅಧಿವೇಶನ ಮುಗಿಯುವವರೆಗೆ ವಿಧಾನಸಭೆಯಲ್ಲಿ ಸಹಕಾರ ಇಲಾಖೆಯ ವಿಷಯಗಳಿಗೆ ಸಂಬಂಧಿಸಿದಂತೆ ಬರುವ ಪ್ರಶ್ನೆಗಳಿಗೆ ಹಾಗು ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಬರುವ ಪ್ರಶ್ನೆಗಳಿಗೆ ಮಾನ್ಯ ಕಾನೂನು ,ನ್ಯಾಯ,

ಮಾನವ ಹಕ್ಕುಗಳು,ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ನಗರಾಭಿವೃದ್ಧಿ ಹಾಗು ಬೆಂಗಳೂರು ಜಲಮಂಡಲಿಯ ಸಚಿವರಾದ ಶ್ರೀ ಸುರೇಶ್ ಕುಮಾರ್‌ರವರು ಉತ್ತರಿಸಲು ಅನುಮತಿ ನೀಡಬೇಕಾಗಿ ಕೋರುತ್ತೇನೆ. ``

ಹಾಗಾಗಿ ನಾನು ಅವರಿಗೆ ಅನುಮತಿ ಕೊಟ್ಟಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ:- ಮಂಡನೆ ಮಾಡಲಿಕ್ಕಾಗಿ ಅವರು ಸಹಕಾರ ಮಂತ್ರಿ. ಹಾಗಾದರೆ ಆ ಇಲಾಖೆ ಮಂತ್ರಿ ಹೇಗಾಗುತ್ತಾರೆ ಅಧ್ಯಕ್ಷರೆ?

ಅಧ್ಯಕ್ಷರು:- ಅವರಿಗೆ ಮುಖ್ಯಮಂತ್ರಿಗಳು ಎಲ್ಲದಕ್ಕೂ ಅಧಿಕಾರ ಕೊಟ್ಟಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ:- ಎಲ್ಲಾದರೂ ಉಂಟೆ?

ಶ್ರೀ ಸಿದ್ದರಾಮಯ್ಯ:- ಅವರು dismiss ಆಗಿದ್ದಾರೆಯೋ ಅಥವಾ ರಾಜೀನಾಮೆ ಕೊಟ್ಟಿದ್ದಾರೋ ಗೊತ್ತಿಲ್ಲ. ಕನಿಷ್ಠ ಪಕ್ಷ ರಾಜ್ಯ ಸರ್ಕಾರ ಅವರನ್ನು ಏಕೆ dismiss ಮಾಡಿದರು ಎಂದು ಹೇಳಬೇಕು.ಅವರ ಇಲಾಖೆಗೆ ಯಾರು ಜವಾಬ್ದಾರಿ ಎಂದು ಹೇಳಬೇಕೇ ಬೇಡವೇ? ನಿಮಗೆ ಸಹಕಾರ ಇಲಾಖೆ ಕೊಟ್ಟಿದ್ದಾರೆಯೇ? ನೋಟಿಫಿಕೇಷನ್ ಆಗಿದೆಯೇ?

ಅಧ್ಯಕ್ಷರು:- ನಾನು ಮುಖ್ಯಮಂತ್ರಿಗಳವರ ಪತ್ರವನ್ನು ಓದಿದೆ. ಸುರೇಶ್ ಕುಮಾರ್ ಎಂದು ನಾನು ಓದಿದ್ದೇನೆ.

ಶ್ರೀ ಎಸ್.ಸುರೇಶ್ ಕುಮಾರ್:- ದಯಮಾಡಿ ಈ ವಿಧೇಯಕವನ್ನು ಮಂಡಿಸಲು ಅವರು ಸಹಕಾರ ಕೊಡಲಿ. ಸೌಹಾರ್ದ ಬಿಲ್ ಮಂಡನೆಗೆ ಸಹಕಾರ ಕೊಡಿ.

ಶ್ರೀ ಸಿದ್ದರಾಮಯ್ಯ:- ಸಹಕಾರ ಮಂತ್ರಿಗಳು ಇಲ್ಲದಿರುವುದರಿಂದ ಅಸಹಕಾರ ಮಾಡುತ್ತಿರುವುದು.

ಶ್ರೀ ಎಸ್. ಸುರೇಶ್ ಕುಮಾರ್:- ವಿಧೇಯಕವನ್ನು ನಾನು ಮಂಡಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:- If there is no Minister for Co-operation, we are not co-operating. Very simple.

ಶ್ರೀ ಟಿ.ಬಿ.ಜಯಚಂದ್ರ:- ಈ ಬಿಲ್ ಸೌಹಾರ್ದ ಸಹಕಾರಿ. ಸೌಹಾರ್ದ ಇದ್ದರೆ ತಾನೆ ಮಂತ್ರಿಗಳಾಗುವುದು?

ಶ್ರೀ ಎಸ್.ಸುರೇಶ್ ಕುಮಾರ್:- ಈಗ ಮುಖ್ಯಮಂತ್ರಿಗಳು ಅಧಿಕಾರ ಕೊಟ್ಟಿದ್ದಾರೆ. ಪತ್ರ ಕಳುಹಿಸಿದ್ದಾರೆ. ಆ ಪತ್ರದ ಪ್ರಕಾರ ನಾನು ಬಿಲ್ ಅನ್ನು ಮಂಡಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ:- ಇದು ಸರ್ಕಾರ ಅಲ್ಲ.ಇದನ್ನೇ Constitutional crisis ಎಂದು ಕರೆಯುವುದು. ನೀವು ಈ ರೀತಿ ಅವಕಾಶ ಮಾಡಿಕೊಟ್ಟರೆ ಹೇಗಾಗುತ್ತದೆ?

ಶ್ರೀ ಎಸ್.ಸುರೇಶ್ ಕುಮಾರ್:-ಮುಖ್ಯಮಂತ್ರಿಗಳು ಪತ್ರ ಬರೆದಿದ್ದಾರೆ, ಅದರಂತೆ ನಾನು ಬಿಲ್ ಅನ್ನು ಮಂಡಿಸುತ್ತಿದ್ದೇನೆ. Very simple.

ಶ್ರೀ ಸಿದ್ದರಾಮಯ್ಯ:- ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ಇಲಾಖೆಯ ಅಧಿಕಾರ ತೆಗೆದುಕೊಂಡಿದ್ದಾರೆಯೇ?

ಶ್ರೀ ಆರ್.ಅಶೋಕ್ (ಮಾನ್ಯ ಉಪಮುಖ್ಯಮಂತ್ರಿಗಳು):- ಮುಖ್ಯಮಂತ್ರಿಗಳಿಗೆ ಯಾರನ್ನು ನೇಮಕ ಮಾಡಬೇಕು, ಯಾರನ್ನು ತೆಗ ೆಯಬೇಕೆಂಬುದಕ್ಕೆ ಅಧಿಕಾರ ಇದೆ.

ಅಧ್ಯಕ್ಷರು:-ಪತ್ರವನ್ನು ಕೊಟ್ಟಿದ್ದಾರೆ. ಸುರೇಶ್ ಕುಮಾರ್ ಎಂದು ಪತ್ರ ಕೊಟ್ಟಿದ್ದಾರೆ.

ಅಧ್ಯಕ್ಷರು:- ಪ್ರಸ್ತಾವನೆ ಮಂಡಿಸಲಾಯಿತು.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ:

ಕರ್ನಾಟಕ ಸೌಹಾರ್ದ ಸಹಕಾರಿ(ತಿದ್ದುಪಡಿ) ವಿಧೇಯಕ, ೨೦೧೨ ಅನ್ನು ಮಂಡಿಸಲು ಅನುಮತಿ ನೀಡಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ಅಧ್ಯಕ್ಷರು: ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯವ್ಯವಹಾರಗಳ ಸಚಿವರು) ಸಹಕಾರ ಸಚಿವರ ಪರವಾಗಿ) ಕರ್ನಾಟಕ ಸೌಹಾರ್ದ ಸಹಕಾರಿ(ತಿದ್ದುಪಡಿ) ವಿಧೇಯಕ,೨೦೧೨ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:-ವಿಧೇಯಕವನ್ನುಮಂಡಿಸಲಾಗಿದೆ.

(ಅನುಬಂಧ–8)

11.ಗಮನ ಸೆಳೆಯುವ ಸೂಚನೆಗಳು

ವಿಷಯ: (೧) ರಾಮನಗರ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಮಾಗಡಿ ಉಪ ವಿಭಾಗಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಅನುದಾನ ಮಂಜೂರಾಗಿದ್ದು ಟೆಂಡರ್ ನಿಯಮಗಳನ್ನು ಉಲ್ಲಂಘನೆ ಮಾಡಿ ಒಂದೆ ಕಾಮಗಾರಿಯನ್ನು ಪ್ರತ್ಯೇಕ ಕಾಮಗಾರಿಗಳಾಗಿ ವಿಂಗಡಿಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವರುಣ):-ರಾಮನಗರ ಜಿಲ್ಲೆಯ ಲೋಕೋಪಯೋಗಿ ಇಲಾಖೆಗೆ ಬಂದಿರುವ ಹಣ ಬಹಳ ದುರುಪಯೋಗವಾಗಿಬಿಟ್ಟಿದೆ. ನಾಲ್ಕೈದು ಜನ ಕಂಟ್ರಾಕ್ಟರ್‌ಗಳು ಸೇರಿಕೊಂಡಿದ್ದಾರೆ. ನಿಮ್ಮ ಇಲಾಖೆಯಲ್ಲಿ ಅವರಿಗೆ ಹೇಗೆ ಮಂಜೂರಾತಿ ಕೊಡುತ್ತಾರೋ ನನಗೆಗೊತ್ತಿಲ್ಲ. ಕಾನೂನು